## ಸಸ್ಯಶಾಸ್ತ್ರೀಯ ತೋಟವನ್ನು ಭವಿಷ್ಯದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ಯೋಜನೆಗಳು

- **ಸಸ್ಯಶಾಸ್ತ್ರೀಯ ತೋಟದಲ್ಲಿ ಹಾಲಿ ಇರುವ ಸಸ್ಯ ಸಂಪತ್ತು ಮತ್ತು ಮೂಲಭೂತ ಸೌಕರ್ಯಗಳ ಜೊತೆಗೆ ಮತ್ತಷ್ಟು ಜೀವವೈವಿಧ್ಯತೆಯನ್ನು ತರಲು ಕೆಳಕಂಡ ಪ್ರಮುಖ ಪರಿಕಲ್ಪನೆಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ.**

---

- ಉತ್ಕೃಷ್ಟ ತೆಂಗಿನ ತಳಿಗಳ ಸಂರಕ್ಷಣೆ
- ಅಂತರ ಬೆಳೆ ಪದ್ಧತಿ
- ಮಿಶ್ರಬೆಳೆ ಪದ್ಧತಿ
- ಬಹು ಅಂತಸ್ತಿನ ಬೆಳೆ ಪದ್ಧತಿ
- ಸ್ಥಳೀಯ ಸಸ್ಯ ಪ್ರಭೇದಗಳ ಸಂರಕ್ಷಣೆ
- ಮಳೆ ನೀರಿನ ಸಂರಕ್ಷಣೆ
- ತೆಂಗು ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆ
- ಬಟರ್ ಫ್ಲೈಗಾರ್ಡನ್
- ಹೆಲಿಕೋನಿಯಾ ಮತ್ತು ಪೈನ್‌ಗಾರ್ಡನ್
- ಗುಲಾಬಿ ವನ
- ಔಷಧಿ ಮತ್ತು ಸುಗಂಧ ದ್ರವ್ಯಗಳ ತಾಕು
- ಸಾವಯವ ಪದ್ಧತಿ ಅಳವಡಿಕೆ
- ಮೇಜ್‌ಗಾರ್ಡನ್
- ಸಂಕನ್‌ಗಾರ್ಡನ್, ಇತ್ಯಾದಿ




**<u>ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.</u>**

**ತೋಟಗಾರಿಕೆ ನಿರ್ದೇಶಕರು,** ಲಾಲ್‌ಬಾಗ್, ಬೆಂಗಳೂರು–560004.
ದೂರವಾಣಿ ಸಂಖ್ಯೆ: 080–26571925, ಇ–ಮೈಲ್: horticulturedirector@gmail.com

**ತೋಟಗಾರಿಕೆ ಜಂಟಿ ನಿರ್ದೇಶಕರು (ಉದ್ಯಾನವನಗಳು, ತೋಟಗಳು & ಪುಷ್ಪಾಭಿವೃದ್ಧಿ),** ಲಾಲ್‌ಬಾಗ್, ಬೆಂಗಳೂರು–560004.
ದೂರವಾಣಿ ಸಂಖ್ಯೆ: 080–26564133, ಇ–ಮೈಲ್: jdhpgf@gmail.com

**ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ.),** ಬೆಂಗಳೂರು ಗ್ರಾಮಾಂತರ ಜಿಲ್ಲೆ,
ದೂರವಾಣಿ ಸಂಖ್ಯೆ: 080–26571925, ಇ–ಮೈಲ್: ddhbangalorer@gmail.com

**ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾ.ವ.),** ಕನ್ನಮಂಗಲ ಸಸ್ಯಶಾಸ್ತ್ರೀಯ ತೋಟ, ಮೊಬೈಲ್: +91 7338011518

ಕರ್ನಾಟಕ ಸರ್ಕಾರ
ತೋಟಗಾರಿಕೆ ಇಲಾಖೆ



# ಕನ್ನಮಂಗಲ ಸಸ್ಯಶಾಸ್ತ್ರೀಯ ತೋಟ





ಮಾನ್ಯ ತೋಟಗಾರಿಕೆ ಸಚಿವರಾದ ಶ್ರೀ ಆರ್. ಶಂಕರ್ ರವರು
ಕರ್ನಾಟಕ ಸಿರಿ ತೋಟಗಾರಿಕೆ ಉದ್ಯಾನವನ,
ಊಟಿಗೆ ಬೇಟಿ ನೀಡಿದ ಸಂದರ್ಭ.

## ಪರಿಚಯ:



ಕರ್ನಾಟಕ ರಾಜ್ಯವು ವಿವಿಧ ಸಸ್ಯ ಪ್ರಭೇದಗಳನ್ನು ಬೆಳೆಯಲು ಸೂಕ್ತವಾದ ಹವಾಗುಣವನ್ನು ಹೊಂದಿರುತ್ತದೆ. ರಾಜ್ಯದಲ್ಲಿ ನೈಸರ್ಗಿಕ ಸಂಪನ್ಮೂಲಗಳಾದ ಸೂರ್ಯನ ಬೆಳಕು, ಫಲತ್ತಾದ ಮಣ್ಣು ಹಾಗೂ ನೀರಿನ ಮೂಲಗಳು ವಿಪುಲವಾಗಿವೆ. ಲಾಲ್‌ಬಾಗ್ ಸಸ್ಯಶಾಸ್ತ್ರೀಯ ತೋಟವನ್ನು 1856ರಲ್ಲಿ ಬ್ರಿಟಿಷ್ ಆಳ್ವಿಕೆಯ ಸಮಯದಲ್ಲಿ ಮೊಟ್ಟಮೊದಲ ಬಾರಿಗೆ ಸಸ್ಯಶಾಸ್ತ್ರೀಯ ತೋಟವನ್ನಾಗಿ ಘೋಷಿಸಲಾಯಿತು, ತೋಟಗಾರಿಕೆ ಇಲಾಖೆಯ ವ್ಯಾಪ್ತಿಗೆ ಬರುವ ಸಸ್ಯತೋಟವು ಒಟ್ಟಾರೆ 2120ಕ್ಕೂ ಹೆಚ್ಚು ಅಮೂಲ್ಯ ಸಸ್ಯ ಪ್ರಭೇದಗಳನ್ನು ಹೊಂದಿರುತ್ತದೆ.

ರಾಜ್ಯದಲ್ಲಿ ಮೊಟ್ಟಮೊದಲ ಬಾರಿಗೆ ದೇಶ–ವಿದೇಶಿ ಸಸ್ಯ ಪ್ರಭೇದಗಳನ್ನು ಪರಿಚಯಿಸಿರುವ ಹೆಗ್ಗಳಿಕೆ ಈ ಸಸ್ಯತೋಟದ್ದು, ನಿರಂತರವಾಗಿ ಲಾಲ್‌ಬಾಗ್ ಸಸ್ಯ ಸಂಪತ್ತನ್ನು ಸಂರಕ್ಷಿಸಿ, ವೃದ್ಧಿಸಿ ಪ್ರದೇಶ ವಿಸ್ತರಣೆಗಾಗಿ ವಿತರಣೆ ಮಾಡಲಾಗುತ್ತಿದೆ.

ಲಾಲ್‌ಬಾಗ್ ಸಸ್ಯಶಾಸ್ತ್ರೀಯ ತೋಟದ ನಂತರ ಹಲವಾರು ದಶಕಗಳವರೆಗೆ ರಾಜ್ಯದಲ್ಲಿ ಯಾವುದೇ ಹೊಸ ಸಸ್ಯಶಾಸ್ತ್ರೀಯ ತೋಟದ ಅಭಿವೃದ್ಧಿಯನ್ನು



ಮಾಡಲಾಗಿರುವುದಿಲ್ಲ, ಇಲಾಖೆಯು ಇದನ್ನು ಮನಗಂಡು ಪರಿಸರವನ್ನು ಕಾಪಾಡಲು, ಸಸ್ಯಸಂಪತ್ತನ್ನು ವೃದ್ಧಿಸಿ ಸಂರಕ್ಷಿಸಲು, ಜೀವವೈವಿಧ್ಯತೆಯನ್ನು ಹೆಚ್ಚಿಸಲು ಅನುವಾಗುವಂತೆ ತೋಟಗಾರಿಕೆ ಇಲಾಖಾ ವತಿಯಿಂದ 70 ಎಕರೆ ವಿಸ್ತೀರ್ಣದಲ್ಲಿ ಉತ್ಕೃಷ್ಟ ತೆಂಗಿನ ತಳಿ ಕ್ಷೇತ್ರವಾಗಿದ್ದ ಕನ್ನಮಂಗಲ ಕ್ಷೇತ್ರವನ್ನು ಹೊಸದಾಗಿ ಸಸ್ಯ ಶಾಸ್ತ್ರೀಯ ತೋಟವನ್ನಾಗಿ ಅಭಿವೃದ್ಧಿ ಪಡಿಸಲು ಸರ್ಕಾರದ ಆದೇಶ ಸಂ: ತೋ.ಇ. 145 ತೊ.ಯೋ.ಕಾ. 2011, ಬೆಂಗಳೂರು, ದಿನಾಂಕ: 30.08.2011ರ ಅನ್ವಯ ಅನುಮೋದನೆ ನೀಡಲಾಗಿದೆ.

ಬೆಂಗಳೂರು ನಗರದಲ್ಲಿ ಲಾಲ್‌ಬಾಗ್ ಮತ್ತು ಕಬ್ಬನ್ ಉದ್ಯಾನವನಗಳು ನಗರದ ಸಾರ್ವಜನಿಕರಿಗೆ ಪ್ರಾಣವಾಯು ಒದಗಿಸುವ ಪ್ರಮುಖ ಶ್ವಾಸಕೋಶಗಳಾಗಿದ್ದು, ಕನ್ನಮಂಗಲ ಸಸ್ಯತೋಟವು ಬೆಂಗಳೂರು ನಗರದ ಪೂರ್ವ ಭಾಗದಲ್ಲಿ ರೂಪಗೊಳ್ಳುತ್ತಿರುವ ಪ್ರಮುಖ ಸಸ್ಯ ಶಾಸ್ತ್ರೀಯ ತೋಟವಾಗಿದೆ.



## ಉದ್ದೇಶಗಳು

- ಜೀವವೈವಿಧ್ಯ ಸಸ್ಯ ಪ್ರಭೇದಗಳನ್ನು ಪರಿಚಯಿಸಿ ಈ ಹವಾಮಾನಕ್ಕೆ ಹೊಂದಿಸಿ ಅವುಗಳನ್ನು ಸಂರಕ್ಷಿಸುವುದು.
- ಸಂರಕ್ಷಿತ ಪ್ರಭೇದಗಳ ಸಸ್ಯೋತ್ಪಾದನೆ ಮಾಡಿ ಅವುಗಳನ್ನು ವಿತರಿಸುವ ಅಭಿವೃದ್ಧಿ ಕೇಂದ್ರವನ್ನಾಗಿ ರೂಪಿಸುವುದು.
- ಸಸ್ಯ ಪ್ರಭೇದಗಳ ಎಲ್ಲಾ ಮಾಹಿತಿಯನ್ನು ದಾಖಲಿಸುವ ವೈಜ್ಞಾನಿಕ ಕೇಂದ್ರವನ್ನಾಗಿಸುವುದು.
- ವಿವಿಧ ಸಸ್ಯಪ್ರಬೇದಗಳನ್ನು ಒಳಗೊಂಡ ಉದ್ಯಾನವನಗಳ ವಿನ್ಯಾಸ ರಚನೆ ಭೂದೃಶ್ಯ ವೈವಿಧ್ಯತೆಗಳನ್ನು ಪ್ರಾತ್ಯಕ್ಷತೆ ರೂಪದಲ್ಲಿ ಬಿಂಬಿಸುವುದು.
- ವಿದ್ಯಾರ್ಥಿಗಳು, ಸಸ್ಯಶಾಸ್ತ್ರಜ್ಞರು ಹಾಗೂ ಪರಿಸರ ಪ್ರಿಯರಿಗೆ ಅಭ್ಯಸಿಸಲು ವೈಜ್ಞಾನಿಕ ವೇದಿಕೆ ಸೃಷ್ಟಿಸುವುದು.



ಕನ್ನಮಂಗಲ ಸಸ್ಯಶಾಸ್ತ್ರೀಯ ತೋಟ





# ಕನ್ನಮಂಗಲ ಸಸ್ಯಶಾಸ್ತ್ರೀಯ ತೋಟ

**ಮೂಲತಃ ಉತ್ಕೃಷ್ಟ ತೆಂಗಿನ ತಳಿ ಕ್ಷೇತ್ರವಾಗಿದ್ದು, ಇಲ್ಲಿರುವ ಅಮೂಲ್ಯ ತೆಂಗಿನ ತಳಿಗಳನ್ನು ಸಂರಕ್ಷಿಸಿ, ಇದನ್ನು ಜೀವ ವೈವಿಧ್ಯತೆಯಿಂದ ಕೂಡಿದ ತಾಣವನ್ನಾಗಿಸಲು 2011ನೇ ಸಾಲಿನಲ್ಲಿ ಸರ್ಕಾರವು ಸಸ್ಯಶಾಸ್ತ್ರೀಯ ತೋಟವೆಂದು ಘೋಷಿಸಿದೆ.**

| | | |
|---|---|---|
| **ವಿಸ್ತೀರ್ಣ** | 70 ಎಕರೆ | |
| **ಸ್ಥಾಪನೆ** | 2011 | |
| **ಸ್ಥಳ** | ಕನ್ನಮಂಗಲ, ಕೆ.ಆರ್. ಪುರಂ, ಪೂರ್ವ, ಬೆಂಗಳೂರು ನಗರ ಜಿಲ್ಲೆ | |
| **ಸಸ್ಯಸಂಪತ್ತು** | 1. ಉತ್ಕೃಷ್ಟ ತೆಂಗಿನ ತಳಿ ಮರಗಳು | 2800 |
| | 2. ಗೋಡಂಬಿ | 230 |
| | 3. ಹಲಸು | 30 |
| | 4. ನೇರಳೆ | 40 |
| | 5. ಹುಣಸೆ | 5 |
| | 6. ಸಸ್ಯಶಾಸ್ತ್ರೀಯ ಮತ್ತು ಅಲಂಕಾರಿಕ ಗಿಡ ಮರಗಳು | 500 |
| | 7. ಔಷಧಿ ಮತ್ತು ಸುಗಂಧಿತ ಗಿಡಗಳು ಮತ್ತು ಅರಣ್ಯ ಜಾತಿಗಿಡಗಳು | 300 |
| | **ಒಟ್ಟು ಸಂಖ್ಯೆ** | **3905** |









**ಬೆಂಗಳೂರಿನಿಂದ ಇರುವ ದೂರ:** 25 ಕಿ.ಮೀ.

**ಹೊಸಕೋಟೆಯಿಂದ ಇರುವ ದೂರ :** 8 ಕಿ.ಮೀ.

| | |
|---|---|
| **ಪ್ರಸ್ತುತ ಮೂಲಭೂತ ಸೌಕರ್ಯಗಳು** | 1. ವಾಯುವಿಹಾರಿಗಳ ಪಥ 2800 ಮೀಟರ್<br>2. ಆರ್. ಒ. ಕುಡಿಯುವ ನೀರಿನ ಘಟಕ<br>3. ಶೌಚಾಲಯ<br>4. ಕೃಷಿಹೊಂಡ 6 ಸಂಖ್ಯೆ<br>5. ಕೊಳವೆಬಾವಿ 2 ಸಂಖ್ಯೆ |













